ಶ್ರೀ ಕೆ. ಪ್ರಭಾಕರ್.—ಯೋಜನೆಯನ್ನು ಕಾರ್ಯಗತ ಮಾಡುವಾಗ ಉದ್ದೇಶಪೂರ್ವಕವಾಗಿ ತಪ್ಪು ಮಾಡಿದ್ದಾರೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆದರೆ, ಅನಿವಾರ್ಯ ಕಾರಣ ಗಳಿಂದಾಗಿ ನ್ಯೂನತೆ ಉಂಟಾಗಿದ್ದರೆ ಅದನ್ನು ಸರ್ಕಾರ ಸರಿ ಮಾಡುತ್ತದೆ. ಆದರೆ, ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಕರ್ತವ್ಯಲೋಪ ಮಾಡಿದ್ದಾರೆಂದು ಸರ್ಕಾರಕ್ಕೆ ಗೊತ್ತಾದರೆ ಅವರಿಗೆ ಎಚ್ಚರಿಕೆಯನ್ನು ಕೊಟ್ಟಿಗೆ ಬದ್ಧರಾಗಿರಬೇಕು ಅಥವಾ ಯಾವ ರೀತಿಗೆ ತರಬೇಕು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಕಾರ್ಯವನ್ನು ಕೈಗೊಳ್ಳುತ್ತದೆ ಹಿಂದು ಮೇಲೆ ಅಧಿಕಾರಿಗಳು ತಪ್ಪು ಮಾಡಿಯೇ ಇದ್ದರೆ, ಅವರು ಕಷ್ಟಕ್ಕೀಡಾಗುವುದು ಅನಿವಾರ್ಯ ಆದುದರಿಂದ, ಸರ್ಕಾರ ಇವೆರಡನ್ನೂ ಪರಿಶೀಲಿಸಿ, ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಂ. ಬಿ ಲಿಂಗಸ್ವಾಮಿ.—ಸ್ವಾಮಿ, ಯಾವ ಯಾವ ತಾಲ್ಲೂಕಿನಲ್ಲಿ ಈ ಯೋಜನೆಯನ್ನು ಪರಿಪೂರ್ಣವಾಗಿ ಕಾರ್ಯಗತ ಮಾಡಿದಾರೆ ? ಈ ವಿಷಯದಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಸರಿಯಾದ ಆದೇಶ ಕೊಟ್ಟಿದ್ದಾರೆಯೇ ? ಬೆಂಗಳೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ಎಲ್ಲಾ ವಿಷಯಗಳಲ್ಲಿಯೂ 100ಕ್ಕೆ 100 ಭಾಗ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದವರನ್ನು ವರ್ಗ ಮಾಡುವಂತಹ ಕಾರಣ ಏನು ಇತ್ತು ?

ಶ್ರೀ ಕೆ. ಪ್ರಭಾಕರ್.—ಇದರಲ್ಲಿ ಮೂರು ಅಂಶಗಳನ್ನು ತಾವು ಮುಂದಿಟ್ಟಿದ್ದೀರಿ. ಬೆಂಗಳೂರು ಜಿಲ್ಲೆಯ ಪ್ರಗತಿಯ ವರದಿ ಈಗ ನನ್ನ ಮುಂದೆ ಇಲ್ಲ ; ಎಲ್ಲೆಲ್ಲಿ ಕಾರ್ಯ ನಡೆದಿಲ್ಲ ಆ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಲಿಲ್ಲವೆಂದು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಜಿಲ್ಲಾಧಿಕಾರಿಗಳ ಪ್ರಶ್ನೆಯನ್ನು ಏನು ಜೋಡಿಸುತ್ತಿದ್ದೀರಿ ಈ ಸಮಯ ಅದಕ್ಕೆ ಸಮಂಜಸವಲ್ಲ. ವರ್ಗ ಆದಾಗ, ಒಳ್ಳೆಯ ಕೆಲಸ ಮಾಡುತ್ತಿದ್ದವರು ವರ್ಗವಾಗುವುದು ಉಂಟು.

Construction of Harijan/Girijans' Hostel in Kollegal

350. SRI M. SIDDAMADAIAH (Kollegal).—Will the Minister for University Education and Wakfs be pleased to state :—

(*a*) whether it has come to the notice of the Government that there is no Hostel to the Harijan/Girijan students in Sree Mahadeswara College in Kollegal where the strength of Harijan/Girijan students is quite large ;

(*b*) if so, whether the Government intends to construct the Harijans/Girijans Hostel ?

SRI S. M. YAHYA (Minister for University Education and Wakfs)–

(*a*) There is a Harijan and Girijans' Hostel in Kollegal, run by a Private Institution.

(*b*) No.

ಶ್ರೀ ಎಂ. ಸಿದ್ದಮಾದಯ್ಯ.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ತಾವು ಏನೂ ಉತ್ತರ ಕೊಟ್ಟಿಲ್ಲ; ಇವತ್ತು ಕೊಳ್ಳೆಗಾಲದ ಶ್ರೀ ಮಹದೇಶ್ವರ ಕಾಲೇಜಿನಲ್ಲಿ ಹರಿಜನ ಮತ್ತು ಗಿರಿಜನ ವಿದ್ಯಾರ್ಥಿಗಳ ಸಂಖ್ಯೆ 310 ರಿಂದ 400ರವರೆಗೂ ಇದೆ. ಇವತ್ತು ಅಲ್ಲಿ ಒಂದು ಸರ್ಕಾರಿ ಕಟ್ಟಡ ಇಲ್ಲದೆ ಬಹಳ ತೊಂದರೆಯಾಗಿದೆ. ಈಗ ಹಾಲ್ ಖಾನಗಿಯವರ ಮನೆಯಲ್ಲಿ ಹಾಸ್ಟೆಲ್ ನಡೆಯುತ್ತಿದ್ದು ಸರ್ಕಾರ ಇತ್ತ ಕಡೆ ಗಮನಕೊಟ್ಟು ಒಂದು ಕಟ್ಟಡ ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಿಕೊಡುತ್ತೀರಾ ?

ಶ್ರೀ ಎಸ್. ಎಂ. ಯಹ್ಯ.—ಕೊಪ್ಪಗಾಲದಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಶೇರಿದಂತೆ ಒಂದು ಖಾಸಗಿ ಹಾಸ್ಟೆಲ್ ಇದೆ. ಅದಕ್ಕೆ ಸರ್ಕಾರದಿಂದ ಧನಸಹಾಯ ದೊರೆಯುತ್ತಿದೆ. ಕಳೆದ ವರ್ಷ 722 ವಿದ್ಯಾರ್ಥಿಗಳಲ್ಲಿ ಪೈಕಿ, 229 ಜನ ಹರಿಜನ ಗಿರಿಜನ ವಿದ್ಯಾರ್ಥಿಗಳು ಇದ್ದರು ; ಕಟ್ಟಡದ ಅವಶ್ಯಕತೆ ಇದ್ದರೆ ಖಂಡಿತವಾಗಿಯೂ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಸಿದ್ದವಾದಯ್ಯ.—ಇದುವರೆವಿಗೂ ಬಾಡಿಗೆಗೆ ತೆಗೆದುಕೊಂಡು ನಡೆಸುತ್ತಿದ್ದರು. ಈಗ ಅವರು ಹರಿಜನರಿಗೆ ಕೊಡುವಾರದು ಎಂದು ಮನಸ್ಸಿನಲ್ಲಿಟ್ಟುಕೊಂಡು ಕೊಟ್ಟಿಲ್ಲ. ತಕ್ಷಣ ಕಟ್ಟಡದ ಬಗ್ಗೆ ವ್ಯವಸ್ಥೆ ಮಾಡಿದರೆ ಬಡ ಮಕ್ಕಳಿಗೆ ಬಹಳ ಅನುಕೂಲವಾಗುತ್ತದೆ.

ಶ್ರೀ ಎಸ್. ಎಂ. ಯಹ್ಯ.—ಮಾನ್ಯ ಸದಸ್ಯರು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿತ್ತು ಎಂದು ಹೇಳಿದ್ದಾರೆ. ಸರ್ಕಾರ ಈ ಬಗ್ಗೆ ಪರಿಶೀಲನೆ ಮಾಡುತ್ತದೆ. ಸರ್ಕಾರ ಕಟ್ಟಡ ಕಟ್ಟಬೇಕಾದರೂ ಒಂದು ವರ್ಷದಲ್ಲಿ ಆಗುವುದಿಲ್ಲ.

ಶ್ರೀ ಎಂ. ಸಿದ್ದವಾದಯ್ಯ.—ಈ ಸಾಲಿನ ಬಡ್ಜೆಟ್ಟಿನಲ್ಲಿಯೇ ಶೇರಿಸಿ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಸ್. ಎಂ. ಯಹ್ಯಾ.—ಅವಶ್ಯಕವಾಗಿದ್ದ ಮೇಲೆ ಖಂಡಿತ ಪರಿಶೀಲನೆ ಮಾಡುತ್ತೇನೆ.

Withdrawal of Special pay of the Staff of City Survey Establishment

454. SRI M. B. RAMASWAMY, (Anekal).—Will the Minister for Revenue be pleased to state :—

(*a*) whether it is a fact that special pay that was being paid to the Ministerial staff working in the City Survey (Enquiry Office) Establishment of Survey Settlement and Land Records Department has been withdrawn ;

(*b*) If so, the reason for the withdrawal and the steps taken to restore the same ?

SRI N. HUTCHAMASTHY Gowda (Minister for Revenue).—

(*a*) Special pay has not been withdrawn. However, the orders sanctioning special pay to the persons working in the City Survey of the Metropolitan area of Bangalore were erroneously applied to the ministerial staff of that office. Action has been taken to ensure that the order is made applicable only to executive staff and peons as envisaged.

(*b*) Does not arise.

ಶ್ರೀ ಎಂ.ಬಿ. ರಾಮಸ್ವಾಮಿ.—ಅಧ್ಯಕ್ಷರಿಗೆ ನಾನು ಮೊದಲನೆಯದಾಗಿ ವಂದಿಸಬೇಕಾಗಿದೆ. ನಾನು ಗಮನಸೆಳೆಯುವ ಸೂಚನೆ ಕೇಳಿದ್ದೆ ಅವರು ಪ್ರಶ್ನೆಯಾಗಿ ಕಳಿಸಿದ್ದಾರೆ. ಸಿಟಿ ಸರ್ವೆ ನೌಕರರು ಏನು ಇದ್ದಾರೆ ಅವರಿಗೆ ಸರ್ಕಾರದಿಂದ ಹುಕುಂ ಹೊರಡಿಸಿ, ವಿಶೇಷ ವೇತನವನ್ನು ಎಕ್ಸಿಕ್ಯೂಟೀವ್ ಮತ್ತು ಮಿನಿಸ್ಟೀರಿಯಲ್ ಸ್ಟಾಫ್‌ಗೆ ಕೊಡಬೇಕೆಂದು ಆರ್ಡರ್ ಮಾಡಿದ್ದರು. ಈ ಆಜ್ಞೆ ಬಂದಮೇಲೆ ಅನೇಕ ಜನ ಸ್ವೀಕಾರ ಮಾಡಿದ್ದಾರೆ ; ಕೆಲವು ಪೋಕರ್ ಅಭ್ಯರ್ಥಿಗಳು ಟರ್ಮಿನೇಟ್ ಆಗಿದ್ದಾರೆ ಕೆಲವರು ರಿಟೈರ್ ಆಗಿದ್ದಾರೆ. ಕೆಲವು ಮಂದಿ ಹೆಣ್ಣುಮಕ್ಕಳು ಗಂಡಂದಿರನ್ನು ಕಳೆದುಕೊಂಡಿದ್ದಾರೆ. ಹೀಗಿರುವಾಗ ಅವರು ತೆಗೆದುಕೊಂಡಿರುವ ವಿಶೇಷ ವೇತನವನ್ನು ಮತ್ತೆ ರಿಕವರಿ ಮಾಡಿ ಎಂದು ಸರ್ಕಾರದಿಂದ ಆದೇಶ ಕೊಟ್ಟಿರುವುದು ಸರಿಯೇ ? ತಾವು ದೊಡ್ಡ ಮನಸ್ಸು ಮಾಡಿ ಹಿಂದಿನ ಆಜ್ಞೆಯನ್ನು ತೆಗೆದುಹಾಕುವ ಬಗ್ಗೆ ಆಶ್ವಾಸನೆ ಕೊಡುತ್ತೀರಾ ?